<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u> DW-4

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ೦ಃ 16.10.2025

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯ ಇರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಿಭಾಗ ಪತ್ರವನ್ನು ವಿಷಕಂಠಚಾರ್ ಎಂಬ ಪತ್ರ ಬರಹಗಾರರ ಬಳಿ ಬರೆಸಿದ್ದು ಅದು ನೊಂದಣಿ ಆಗಿರುವುದಿಲ್ಲ. ಸದರಿ ವಿಭಾಗ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಚುಂಚೇಗೌಡರ ಅಂದಾನಿಗೌಡರು, ಗವಿ ಸಿದ್ದೇಗೌಡರು ಸಹಾ ಸದರಿ ವಿಭಾಗ ಪತ್ರಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

ಹೆಣ್ಣು ಮಕ್ಕಳುಗಳು ಆ ದಿನ ಪಂಚಾಯಿತಿಗೆ ಸೇರಿದ್ದರೇ ಎನ್ನುವ ಪಶ್ನೆಗೆ ಸಾಕ್ಷಿಯು ಸೇರಿದ್ದರು ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳುಗಳು ವಿಭಾಗ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ರೂ.10,000/- ಹಣವನ್ನು ಹೆಣ್ಣು ಮಕ್ಕಳಿಗೆ ನೀಡಿರುವ ಬಗ್ಗೆ ಯಾವುದೇ ದಾಖಲೆ ಆಗಿರುವುದಿಲ್ಲ. ಆ ರೀತಿ ಯಾವುದೇ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ಮತ್ತು ಅವರ ಮಕ್ಕಳಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಹೆಣ್ಣು ಮಕ್ಕಳುಗಳು ಪಂಚಾಯಿತಿಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ಮತ್ತು ಅವರ ಮಕ್ಕಳಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಭಾಗಂಶವನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಚನ್ನಮ್ಮ ರವರ ಮಗಳು ತೀರಿಕೊಂಡ ವಿಚಾರ ನನಗೆ ಗೊತ್ತಿರುತ್ತದೆ. ಚನ್ನಮ್ಮ ರವರ ಮಗಳು ತೀರಿಕೊಂಡಾಗ ವಾದಿ ಮತ್ತು ಪ್ರತಿವಾದಿಯರು ಪಂಚಾಯಿತಿ ಸೇರಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಹೇಳುತ್ತಿರುವಂತೆ ಯಾವುದೇ ಪಂಚಾಯಿತಿ ಪಾರಿಕತ್ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಜೊತೆ ಶರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2007 ರಲ್ಲಿ ಯಾವುದೇ ಪಂಚಾಯಿತಿ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.